# ಪ್ರತಿಭಾವಂತ ಜೋಡಿ ಮಾಡೀತೆ ಮೋಡಿ?



ಕೇಪ್‌ಟೌನ್, ಉಗಾಂಡ, ಕೀನ್ಯಾ, ನೈಜೀರಿಯಾ, ನ್ಯೂಜಿಲೆಂಡ್, ಜರ್ಮನಿ, ಆಸ್ಟ್ರೇಲಿಯಾ, ನೆದರ್ಲೆಂಡ್, ಬೆಲ್ಜಿಯಂ, ಫಿನ್ಲೆಂಡ್, ಐರ್ಲೆಂಡ್, ಕುವೈತ್, ಮಸ್ಕತ್, ದುಬೈ, ಘಾನ, ಈಜಿಪ್ಟ್.... ಇದೇನಿದು ವಿದೇಶಗಳ ಪಟ್ಟಿ ಎಂದಿರಾ? ನಿರ್ದೇಶಕ ಪ್ರಶಾಂತ್ ರಾಜ್ ಪಠಿಸುತ್ತಿರುವ ದೇಶಗಳ ಹೆಸರುಗಳಿವು. ಇವುಗಳ ಜೊತೆಗೆ ಮತ್ತಷ್ಟು ದೇಶಗಳಲ್ಲಿ ತಮ್ಮ ನಿರ್ದೇಶನದ 'ಜೂಮ್' ಚಿತ್ರವನ್ನು ತೆರೆಕಾಣಿಸುವ ಪ್ರಯತ್ನ ಅವರದು.

ವಿದೇಶ ಸಂಚಾರದ ಸಂಗತಿಯಿಂದ ತವರಿನ ವಿದ್ಯಮಾನಗಳತ್ತ ಬಂದರೆ, ಕರ್ನಾಟಕದಲ್ಲೂ 'ಜೂಮ್' ಚಿತ್ರದ ಕಾವನ್ನು ಉಂಟುಮಾಡಲು ಪ್ರಶಾಂತ್ ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ತಕ್ಕಹಾಗೆ, ಇತ್ತೀಚೆಗಷ್ಟೇ ಚಿತ್ರದ ಟ್ರೇಲರ್ ಅನ್ನು 'ಗಣೇಶ ಹಬ್ಬ'ದ ರೀತಿ ಅಭಿಮಾನಿಗಳ ನಡುವೆ ಬಿಡುಗಡೆ ಮಾಡಿದ್ದಾರೆ. ಉಳಿದಿರುವುದು ಚಿತ್ರಮಂದಿರಗಳಲ್ಲಿ 'ಗಣೇಶ ದರ್ಶನ' ಅಷ್ಟೇ.

ಅಂದ ಹಾಗೆ, 'ಜೂಮ್' ಚಿತ್ರದ ಮಟ್ಟಿಗೆ ಒಂದಷ್ಟು ವಿಶೇಷಗಳಿವೆ. ರಾಧಿಕಾ ಪಂಡಿತ್ ಹಾಗೂ ಗಣೇಶ್ ಅವರ ಜೋಡಿ ಚಿತ್ರದ ಮೊದಲ ಆಕರ್ಷಣೆ. ಇಬ್ಬರೂ ಕಿರುತೆರೆಯಲ್ಲಿ ಪಳಗಿದವರು ಹಾಗೂ ತಮ್ಮ ಜನಪ್ರಿಯತೆಯನ್ನು ಬೆಳ್ಳಿತೆರೆಯಲ್ಲೂ ವಿಸ್ತರಿಸಿಕೊಂಡವರು. ಈ ಪ್ರತಿಭಾವಂತ ಜೋಡಿ ಒಟ್ಟಿಗೆ ನಟಿಸಿರುವುದು ಪ್ರೇಕ್ಷಕರ ಪಾಲಿಗೆ ಹಬ್ಬ ಎನ್ನಿಸಲಿದೆ ಎನ್ನುತ್ತಿದೆ ಚಿತ್ರತಂಡ.

ಗಣೇಶ್ ಹಾಗೂ ರಾಧಿಕಾ ಅವರಿಗೆ 'ಜೂಮ್' ಬಗ್ಗೆ ಸಾಕಷ್ಟು ನಿರೀಕ್ಷೆಗಳಿವೆ. ಇಬ್ಬರ ಪಾಲಿಗೂ ಇದು ದೀರ್ಘ ಅಂತರದ ನಂತರ ಬಿಡುಗಡೆ ಆಗುತ್ತಿರುವ ಸಿನಿಮಾ. ಹಾಗಾಗಿ, ಈ ಸಿನಿಮಾದ ಗೆಲುವು ಇಬ್ಬರಿಗೂ ಮುಖ್ಯವಾಗಿದೆ. ಈ ಚಿತ್ರದಲ್ಲಿ ಗಣೇಶ್ ಹೇರ್‌ಸ್ಟೈಲ್ ಬದಲಿಸಿಕೊಂಡಿದ್ದು, ಹೊಸ ಅವತಾರ ಅಭಿಮಾನಿಗಳನ್ನು ಸೆಳೆಯಲಿದೆ ಎನ್ನುವ ಅನಿಸಿಕೆ ಅವರದು. 'ಇದೊಂದು ಸ್ಟೈಲಿಷ್ ಸಿನಿಮಾ' ಎನ್ನುವ ರಾಧಿಕಾ ಅವರಿಗೆ, 'ಜೂಮ್'ನಲ್ಲಿನ ಕಾಮಿಡಿ ಕಥೆ ಖುಷಿ ಕೊಟ್ಟಿದೆ. ಈ ಖುಷಿ ಪ್ರೇಕ್ಷಕರಿಗೂ ದೊರೆಯಲಿದೆ ಎನ್ನುವ ವಿಶ್ವಾಸ ಅವರದು. ಹಿರಿಯ ನಟ ಕಾಶೀನಾಥ್ ಹಾಗೂ ಸಾಧು ಕೋಕಿಲ ತಾರಾಗಣದಲ್ಲಿ ಇರುವುದು ಕೂಡ ಚಿತ್ರಕಥೆಯ ಹೂರಣವನ್ನು ಸೂಚಿಸುವಂತಿದೆ.

ಇನ್ನು ನಿರ್ದೇಶಕ ಪ್ರಶಾಂತ್ ರಾಜ್ ಹಿನ್ನೆಲೆ ಕೂಡ ಆಕರ್ಷಕವಾಗಿದೆ. ಅವರ 'ಲವ್ ಗುರು' ಹಾಗೂ 'ಗಾನಬಜಾನ' ಚಿತ್ರಗಳು ನಿರೂಪಣೆ ಹಾಗೂ ಚಿತ್ರಕಥೆಯ ಕಸುಬುದಾರಿಕೆಯಿಂದ ಗಮನಸೆಳೆದಿದ್ದವು. ಎರಡೂ ಚಿತ್ರಗಳ ನಾಯಕಿ ರಾಧಿಕಾ ಪಂಡಿತ್ ಈಗ 'ಜೂಮ್'ನಲ್ಲೂ ಇದ್ದಾರೆ. ಪ್ರಶಾಂತ್‌ರ 'ವಿಶಲ್' ಕೂಡ ಸಾಕಷ್ಟು ಸುದ್ದಿ ಮಾಡಿತ್ತು. ಈಗ 'ಜೂಮ್' ಮೂಲಕ ಅವರು ನಿರ್ದೇಶಕನಾಗಿ ಹೊಸ ಜಿಗಿತದ ನಿರೀಕ್ಷೆಯಲ್ಲಿದ್ದಾರೆ.

ತಮನ್ ಸಂಗೀತ ನಿರ್ದೇಶನದ ಗೀತೆಗಳು ಸಿನಿಮಾದ ಮತ್ತೊಂದು ಆಕರ್ಷಣೆ ಎನ್ನುತ್ತಾರೆ ಪ್ರಶಾಂತ್ ರಾಜ್. 'ರಾಜಾಧಿರಾಜ' ಎನ್ನುವ ಶೀರ್ಷಿಕೆ ಗೀತೆಯನ್ನು ಪುನೀತ್ ಹಾಡಿದ್ದಾರಂತೆ. ಇದಿಷ್ಟು ಮಾತ್ರವಲ್ಲ– ಸಿನಿಮಾ ಸಾಕಷ್ಟು ಅದ್ದೂರಿಯಾಗಿದೆ ಎಂದು ಹೇಳಲು ಅವರು ಮರೆಯುವುದಿಲ್ಲ. ಹೊಸ ಬಗೆಯ ಪ್ರಯತ್ನಗಳು ಗಾಂಧಿನಗರದಲ್ಲಿ ಗೆಲ್ಲುತ್ತಿರುವ ಸಂದರ್ಭದಲ್ಲಿ 'ಜೂಮ್' ಕೂಡ ಗೆಲ್ಲಲಿದೆ ಎನ್ನುವ ನೆಚ್ಚುಗೆ ಅವರದು.

■ ರಘು